Date : 24-9-2015

# ಭಾರತದಲ್ಲಿ E 10 ಪಾಲಿಸಿಯನ್ವಯ ಇಥೆನಾಲ್ ಪೂರೈಕೆಯ ಗುರಿ ನಿಗದಿ

ಭಾರತ ಆಹಾರ ಮಂತ್ರಾಲಯ ಅಕ್ಟೋಬರ್ 2015 ರಿಂದ ಅನ್ವಯವಾಗುವ ಹೊಸ E10 ಪಾಲಿಸಿಯನ್ವಯ ಪೂರೈಕೆಮಾಡಬೇಕಾಗಿರುವ ಇಥೆನಾಲ್ ಪೂರೈಕೆಯ ಗುರಿ ನಿಗದಿಪಡಿಸಿದೆ. ಆದರೆ ಈ ಗುರಿ ಈಗಿರುವ ಉತ್ಪಾದನಾ ಸಾಮರ್ಥ್ಯಕ್ಕೆ ಮೀರಿದ್ದಾಗಿದೆ. ಇದರನ್ವಯ ಉತ್ತರಪ್ರದೇಶ 560 ಮಿಲಿಯನ್ ಲೀಟರ್ ಇಥೆನಾಲ್ ಪೂರೈಕೆ ಮಾಡಬೇಕಾಗಿದೆ. ಉತ್ತರಪ್ರದೇಶ 350 ಮಿಲಿಯ ಲೀಟರ್‌ಗಳ ಉತ್ಪಾದನಾ ಸಾಮರ್ಥ್ಯ ಹೊಂದಿದೆ. 250 ಮಿಲಿಯನ್ ಲೀಟರ್ ಉತ್ಪಾದನಾ ಸಾಮಾರ್ಥ್ಯವಿರುವ ಮಹಾರಾಷ್ಟ್ರ 530 ಮಿಲಿಯನ್ ಲೀಟರ್ ಇಥೆನಾಲ್ ಪೂರೈಸಬೇಕಾಗಿದೆ. 230 ಮಿಲಿಯನ್ ಲೀಟರ್ ಉತ್ಪಾದನಾ ಸಾಮರ್ಥ್ಯವಿರುವ ಕರ್ನಾಟಕ 250 ಮಿಲಿಯನ್ ಲೀಟರ್ ಇಥೆನಾಲ್ ಪೂರೈಕೆ ಮಾಡಬೇಕಾಗಿದೆಯೆನ್ನಲಾಗಿದೆ.